ದಿನಾಂಕಃ 02.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ಮಿಸ್.12/2000 ರಲ್ಲಿ ಆದ ಆದೇಶವನ್ನು ನನ್ನ ತಾಯಿ ಪ್ರಶ್ನೆ ಮಾಡಿರುವುದಿಲ್ಲ. ಆ ಪ್ರಕರಣದಲ್ಲಿ ನಾನು 4 ನೇ ಎದುರುದಾರನಾಗಿದ್ದೆ ಎಂದರೆ ಸರಿಯಲ್ಲ, ಅದರಲ್ಲಿ ನಾನು ಸಾಕ್ಷ್ಯ ನೀಡಿರುವುದಿಲ್ಲ. ನಿಪಿ1 ರಲ್ಲಿರುವ 4 ಸಹಿಗಳು ನನ್ನದೇ ಆಗಿರುತ್ತವೆ. ಅದರಲ್ಲಿ ವಿರುಪಾಕ್ಷಪ್ಪ ಎಂದು ಇರುವ ಹೆಸರು ನನ್ನದಲ್ಲ. ಸದರಿ ನಿಪಿ1 ನ್ನು ನನ್ನ ವಕೀರಾದ ಎಫ್.ಡಿ ಡಂಡಿನ್‌ರವರು ತಯಾರಿಸಿದ್ದಾರೆ ಎಂದರೆ ಸರಿ. ಅದನ್ನು ತಯಾರಿಸುವಾಗ ಅದರಲ್ಲಿ ನಿಮ್ಮ ಹೆಸರು ವಿರಪಾಕ್ಷಪ್ಪ ಎಂದು ತಪ್ಪಾಗಿದೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ನನ್ನ ತಾಯಿ ಮಾಡಿರಬಹುದು ನಾನು ಯಾವ ವಕೀಲರ ಬಳಿಯೂ ಹೋಗಿಲ್ಲ ಎನ್ನುತ್ತಾರೆ. ಮಿಸ್.12/2000 ರಲ್ಲಿ ನಾನೇ ನಿಮ್ಮನ್ನು ಪಾಟೀಸವಾಲು ಮಾಡಿದ್ದೇನೆ ಎದರೆ ಸಾಕ್ಷಿ ನಾನು ಆಗ ಚತ್ತಿಸ್‌ಗಡ್‌ನಲ್ಲಿ ಕೆಲಸ ಮಾಡುತ್ತಿದ್ದೆ, ನಾನು ಇಲ್ಲಿಗೆ ಬಂದಿರುವ ಚಾನ್ಸೇ ಇಲ್ಲ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ದಿಃ16.02.2005 ರಂದು ನಿಮ್ಮ ಜನನ ಪ್ರಮಾಣಪತ್ರ ಮತ್ತು ಉಪವಿಭಾಗಾಧಿಕಾರಿಗಳ ಆದೇಶದ ದೃಢಿಕೃತ ನಕಲನ್ನು ನಿಆರ್12 ಮತ್ತು 13 ರಂತೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

2. ನಿಆರ್14 ನ್ನು ಸಹ ನಾನು ಸದರಿ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಪ್ರಕರಣದಲ್ಲಿ ಈ ರೀತಿ ನ್ಯಾಯಾಲಯದಲ್ಲಿ ಸಾಕ್ಷಿಯ ಕಟಕಟೆಯಲ್ಲಿ ನಿಂತು ಸಾಕ್ಷ್ಯ ಹೇಳಿರುವುದಿಲ್ಲ. ನಾನು ದಿಃ16.02.2005 ರಂದು ನಾನು ಚತ್ತಿಸ್‌ಗಡ್‌ನಲ್ಲಿ ಕೆಲಸ ಮಾಡುತ್ತಿದ್ದೆ ಗೋಕಾಕ್‌ಗೆ ಬಂದಿರಲಿಲ್ಲ. ಸದರಿ ಪ್ರಕರಣದಲ್ಲಿ ಸದರಿ ದಿನಾಂಕದಂದು ನಾನು ಸಿವಿಲ್ ಜಡ್ಜ್ ಗೋಕಾಕ್ ನ್ಯಾಯಾಲಯದ ಶಿರೆಸ್ತೆದಾರರರ ಬಳಿ ಖುದ್ದಾಗಿ ಹಾಜರಾಗಿ ಪ್ರಮಾಣಪತ್ರವನ್ನು ಪ್ರಮಾಣಿಕರಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎಫ್.ಡಿ ದಂಡಿನ್ ವಕೀಲರು ನಾನೇ

ವಿರುಪಾಕ್ಷಪ್ಪ ಗುರುಲಿಂಗಪ್ಪ ಪಟ್ಟನಶೆಟ್ಟಿ ಎಂದು ಗುರುತಿಸಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಸಿ1 ರ ಮೇಲೆ ಇರುವ ವಕೀಲರ ಸಹಿ ಎಫ್.ಡಿ ದಂಡಿನ್ ವಕೀಲರ ಸಹಿ ಇರಬಹುದು. ಸದರಿ ಪ್ರಕರಣದ ನಿಸಿ1 ರಲ್ಲಿ ನಮ್ಮ ವಿಳಾಸ ಬಾವಿಕಟ್ಟಿ ಪ್ಲ್ಯಾಟ್ ಶ್ರೀನಗರ ಹತ್ತಿರ ದಾರವಾಡ್ ವಿಳಾಸವನ್ನು ಕೊಟ್ಟಿದ್ದೇವೆ ಎಂದರೆ ಸರಿ. ಎಫ್.ಡಿ ದಂಡಿನ್ ವಕೀಲರು ದಾರವಾಡ್‌ದವರೇ ಎಂದರೆ ಸರಿ.

3. ಮಿಸ್.12/2000 ರ ಪ್ರಕರಣವನನ್ನು ಈ ನ್ಯಾಯಾಲಯದಲ್ಲಿ ಎಫ್.ಡಿ ದಂಡಿನ್ ವಕೀಲರು ಮತ್ತು ಎಸ್.ಎಸ್ ಹಂಚಿನಾಳ್ ವಕೀಲರು ನನ್ನ ತಾಯಿಯ ಪರವಾಗಿ ಪ್ರಕರಣ ನಡೆಸುತ್ತಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಾಯಿಯ ಪರವಾಗಿ ಎಸ್.ಎಸ್ ಹಂಚಿನಾಳ್ ವಕೀಲರು ಮತ್ತು ನನ್ನ ಪರವಾಗಿ ಎಫ್.ಡಿ ದಂಡಿನ್ ವಕೀಲರು ಪ್ರಕರಣ ನಡೆಸುತ್ತಿದ್ದರು ಎಂದರೆ ಸರಿ, 2019 ರಲ್ಲಿ ನನಗೆ ಗೊತ್ತಾಯಿತು. ಓ.ಎಸ್ ನಂ.365/1995 ರ ತೀರ್ಪಿನ ಮೇಲೆ ಮಿಸ್.12/2000 ದಾಖಲು ಮಾಡಿದ್ದೇನೆ ಎಂದು ನೀವು ಮತ್ತು ನಿಮ್ಮ ತಾಯಿ ಈ ದಾವೆಯಲ್ಲಿ ಹೇಳಿದ್ದೀರಿ ಎಂದರೆ ಸಾಕ್ಷಿ ನಾನು ಈ ವಿಚಾರವನ್ನು ನನ್ನ ವಕೀಲರಿಗೆ ಹೇಳಿದ್ದೇನೆ ಎನ್ನುತ್ತಾರೆ. ನಿಮ್ಮ ವಾದಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಪುರಾ ಓದಿಲ್ಲ, ನಮ್ಮ ವಕೀಲರಿಗೆ ಹೇಳಿದ್ದೇನೆ ಎನ್ನುತ್ತಾರೆ. ಮಿಸ್.12/2000 ಕ್ಕೆ ಸಂಭಂದಪಟ್ಟ ಎಲ್ಲಾ ದಾಖಲೆಗಳನ್ನು ಈ ದಾವೆ ಸಲ್ಲಿಸುವಾಗ ನನ್ನ ವಕೀಲರಿಗೆ ಕೊಟ್ಟಿದ್ದೇನೆ. ಮಿಸ್.12/2000 ವಜಾ ಆಗಿರುವ ಕಾರಣ ನಾನು ತಿಳಿದುಕೊಂಡಿದ್ದೇನೆ. ನನ್ನ ತಾಯಿ ಗುರುಲಿಂಗಪ್ಪನ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದು ಸದರಿ ಮಿಸ್‌ನಲ್ಲಿ ಆದೇಶ ಆಗಿದೆ ಎಂದರೆ ಸರಿ.

4. ಸಾಕ್ಷಿ ಎಕ್ಸ್‌ಪಾರ್ಟೆ ಆಗಿದ್ದು ಯಾವುದೇ ದಾಖಲೆಗಳನ್ನು ಅವರು ಕೊಟ್ಟಿಲ್ಲ ಎನ್ನುತ್ತಾರೆ. ಸದರಿ ಮಿಸ್‌ನಲ್ಲಿ ನನ್ನ ತಾಯಿ ಗುರುಲಿಂಗಪ್ಪನ ಹೆಂಡತಿ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಲು ನಿಮಗೇನು ತೊಂದರೆ ಇತ್ತು ಎಂದರೆ

ಸಾಕ್ಷಿ ನನಗೆ ಕೇಸ್ ಮಾಹಿತಿ ಇರಲಿಲ್ಲ, ನನ್ನ ತಾಯಿಗೆ ಏನು ತೊಂದರೆ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಮಿಸ್‌ನಲ್ಲಿ ನನ್ನ ತಾಯಿಯ ಸಾಕ್ಷ್ಯ ಆಗಿದೆ ಎಂದರೆ ಸರಿ. ನನ್ನ ತಾಯಿಯ ಆರೋಗ್ಯ ಸರಿ ಇರಲಿಲ್ಲ ಎಂದು ಪ್ರಮಾಣಪತ್ರ ಕೊಟ್ಟ ವೈದ್ಯರನ್ನು ಸಹ ಸಾಕ್ಷ್ಯವನ್ನಾಗಿ ಮಾಡಿಸಿದ್ದಾರೆ ಎಂದರೆ ಸರಿ. ಗುರುಲಿಂಗಪ್ಪನವರ ಕಾಯಿದೆ ಬದ್ಧ ಹೆಂಡತಿಯ ಮಗನ ಸಾಕ್ಷ್ಯ ಸಹ ಸದರಿ ಮಿಸ್ ಪ್ರಕರಣದಲ್ಲಿ ಆಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಾಯಿಯ ಸಾಕ್ಯ 2 ಬಾರಿಯಾಗಿದೆ ಎಂದರೆ ಸರಿ. ಮಿಸ್.12/2000 ನ್ನು ದಾಖಲು ಮಾಡಿದಾಗ ಗುರುಲಿಂಗಪ್ಪ ಜೀವಂತವಾಗಿದ್ದರು ಎಂದರೆ ಸರಿಯಲ್ಲ, ಅವರು 1999 ರಲ್ಲಿ ಮೃತಪಟ್ಟಿದ್ದಾರೆ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ